ಅನುವಾದಿತ ಕತೆ

# ಎಂಥ ಮಧುರ ದನಿ


ಅರೆಬಿಕ್ ಮೂಲ: **ಸಾಲ್ವಾ ಬಕ್ರ್**

ಇಂಗ್ಲಿಷ್‌ನಿಂದ ಕನ್ನಡಕ್ಕೆ: **ಕೇಶವ ಮಳಗಿ**

ಕಲೆ: ಸಂತೋಷ್ ಸಸಿಹಿತ್ಲು


ದಿನನಿತ್ಯದ ಅನಿವಾರ್ಯ ಕರ್ಮಗಳನ್ನು ಬಿಟ್ಟಂತೆ ಉಳಿದ ಸಂಗತಿಗಳೆಲ್ಲ ತೀರ ಸಹಜವೆನ್ನಿಸುವಂತೆಯೇ ಇದ್ದವು. ಓರಣವಾಗಿರಿಸಿದ ಕೋಣೆಗಳು, ಒಪ್ಪವಾದ ಮೇಜು; ಕ್ಷೀಣದನಿಯಲ್ಲಿ ರೇಡಿಯೊ ಬಿತ್ತರಿಸುವ ಮಧ್ಯಾಹ್ನದ ಸುದ್ದಿ, ಎಲ್ಲ ಅದೇ. ಆದರೂ ಹೆಂಡತಿಯ ಮನಸ್ಸಿನಲ್ಲೇನೊ ಲೆಕ್ಕಾಚಾರ ನಡೆಯುತ್ತಿದೆ, ಎಂದು ಅಬ್ದುಲ್ ಹಮೀದನಿಗೆ ಅನುಮಾನ. ಆಕೆ ತುತ್ತನ್ನು ನುಂಗುವಾಗೆಲ್ಲ ಭುಜದ ನಡುವಿನ ಕತ್ತು ಎಂದಿಗಿಂತ ತುಸು ಹೆಚ್ಚಾಗಿಯೇ ಹೂತಂತೆ ಕಾಣಿಸುತ್ತಿತ್ತು. ಪ್ರತಿಮಾತಿಗೆ ನೀಡುವ ಉತ್ತರದಲ್ಲಿ ಅನ್ಯಮನಸ್ಕತೆ ಬೆರೆತಿರುತ್ತಿತ್ತು.

"ಏನಾಗಿದೆ ಸಯೀದ ನಿನಗೆ?" ಕೇಳಿದ. "ಏನಿಲ್ಲ" ಎಂದು ಮಂಕಾಗಿ ಉತ್ತರಿಸಿದವಳು ಚಹಾಕ್ಕೆಂದು ಎಸರಿಗಿಟ್ಟ ನೀರು ಒಲೆ ಮೇಲೆ ಚೆಲ್ಲುತ್ತಿದೆ, ಎಂದು ಸರಸರ ಅಡುಗೆಮನೆಯನ್ನು ಸೇರಿದ್ದಳು. ವಾಪಸ್ಸು ಬಂದಾಗ ಇನ್ನಷ್ಟು ಮುಖ ಬಿಳಚಿಕೊಂಡಂತಿತ್ತು. ಜತೆಗೆ, ಲೋಟಕ್ಕೆ ಚಹಾ ಬಗ್ಗಿಸುವಾಗ ಮುಚ್ಚಳ ನೆಲಕ್ಕೆ ಉರುಳಿಸಿದಳು.

"ಸಯೀದ, ಏನಾಗಿದೆ ನಿನಗೆ?" ಈ ಸಲ ಹಮೀದ ಗದರಿಕೆಯ ದನಿಯಲ್ಲಿ ಕೇಳಿದ. ಆಕೆ ಸಂಕೋಚದಲ್ಲಿ,

"ನಿಮ್ಮ ಜೊತೆ ಸ್ವಲ್ಪ ಮಾತಾಡಬೇಕಿತ್ತು. ಆದರೆ, ಯಾಕೊ ಮುಜುಗರ!" ಎಂದು ಪಿಸುನುಡಿಯಲ್ಲಿ ಅಂದಳು.

ಸಿಗರೇಟು ಉರಿಸುತ್ತ, "ಒಳ್ಳೇ ಸುದ್ದೀನೆ ಇರಬೇಕು" ಅಂದ. ಆಕೆ ಹೇಳುವ ಸುದ್ದಿ ಮೊದಲೆ ಗ್ರಹಿಸಿದವನಂತಿದ್ದ. ತುರ್ತು ಖರ್ಚಿನ ನೆಪವೊಡ್ಡಿ ಕಾಸು ಕೇಳಬಹುದು. ಅಥವಾ ಆಕೆಗೆ ತಿಂಗಳ ಖರ್ಚಿಗೆಂದು ಕೊಡುತ್ತಿರುವ ಹಣ ಸಾಕಾಗುತ್ತಿಲ್ಲ, ಹೆಚ್ಚು ಕೊಡಿ, ಎಂದು ಒಪ್ಪಿಸಲು ನೋಡಬಹುದು. ಮುಖಾಮುಖಿಗೆ ಸಿದ್ಧನಾಗುವವನಂತೆ ಒಮ್ಮೆ ಹಲ್ಲು ನುರಿದ. ಹುಬ್ಬು ಮೇಲೆ ಕೆಳಗೆ ಮಾಡಿದ, ಎಡಬಲಕ್ಕೆ ಕತ್ತು ತಿರುಗಿಸುತ್ತ ಉಳುಕು ತೆಗೆದ. ವಾಗ್ಯುದ್ಧ ಎಂಥದ್ದೇ ಆಗಿರಲಿ ತಾನೇ ಜಯಶಾಲಿಯಾಗಬೇಕೆಂಬುದು ಅವನ ಠರಾವು. ಆಕೆ ತಲೆಕೆಳಗೆ ಮಾಡಿದರೂ ಕೊಡುತ್ತಿರುವ ದುಡ್ಡಿಗಿಂತ ಕಿಲುಬು ಕವಡೆಯೂ ಹೆಚ್ಚಿಗೆ ಬಿಚ್ಚುತ್ತಿರಲಿಲ್ಲ. ಕಡು ಚಹ ಹೀರಿ ಗಂಟಲು ಸರಿಮಾಡಿಕೊಂಡು ಹೇಳಿದ:

"ಹೂಂ. ಏನೂಂತ ಹೇಳೋಣವಾಗಲಿ."

ಸಯೀದ ಇದ್ದಬದ್ದ ಕಸುವು ನಾಲಗೆಗೆ ತಂದು ಮಾತಾಗಿಸಲು ನೋಡಿದರೂ ಸಾಧ್ಯವಾಗದೆ, ಧೈರ್ಯ ಪಾದದ ಚಪ್ಪಲಿಗಳಡಿ ಅಡಗಿತು. ಅಸಹಾಯಕ ದನಿ ಕೊನೆಗೂ ಹೊರಬಂತು.

"ನಾನು... ಮತ್ತೆ... ನನಗೆ ಗೊತ್ತಾಯ್ತು..."

"ಏನೇ ಅದು. ಮತ್ತೆ ಬಸಿರಿಯೋ ಹೇಗೆ?" ಬೆಂಕಿಯ ಮೇಲೆ ಕೂತವನಂತೆ ಗಂಡ ಜಿಗಿದು ಚೀರಿದ. "ಇದು ಸಾಧ್ಯವೆ ಇಲ್ಲ." ಆತ ಉದ್ವೇಗದಿಂದ ಕುದಿಯುತ್ತಿದ್ದ.

"ಹೀಗೆ ಆಗೋದು ಹೇಗೆ ಸಾಧ್ಯ ಸಯೀದ? ದೇವರಾಣೆ ಇದೇನಾದ್ರೂ ನಿಜವಾಗಿದ್ದರೆ ನಿನ್ನ ಬದುಕನ್ನ ನರಕ ಮಾಡಿಬಿಡ್ತೀನಿ. ಈ ಮಕ್ಕಳಿಂದಾಗಿ ನನ್ನ ತಲೆ ರೋಸಿದೆ. ಕಿಸೆ ದಿವಾಳಿ ಎದ್ದಿದೆ. ಮಗೂನ ಹೆರೊದಕ್ಕಿರ್ಲಿ, ಹೊಟ್ಟೆ ಇಳಿಸೋದಕ್ಕೂ ದುಡ್ಡಿಲ್ಲ. ಅಂಥಾದ್ದರಲ್ಲಿ ಬಸಿರೆ? ನೀನೇ ಏನಾದರೂ ಪರಿಹಾರ ಹುಡುಕು, ಮಹಾ ಜಾಣೆಯಲ್ಲ..." ತೊಡೆ